ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

**ವಿಷಯ:-** ಸುಜಲ-III ಯೋಜನೆಯ ನಿರ್ಗಮನ (Exit Strategy) ಕಾರ್ಯಕ್ರಮದಡಿ ಭೂಸಂಪನ್ಮೂಲ (LRI) ಮಾಹಿತಿ ಪ್ರಸರಣೆ ಚಟುವಟಿಕೆಗಳ ವೆಚ್ಚ ಭರಿಸಲು ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ, ಇವರಿಗೆ, ರೂ.3,00,333/- ಅನುದಾನ ವರ್ಗಾಯಿಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ: AGRI-AML/103/2019, ಬೆಂಗಳೂರು, ದಿನಾಂಕ:31.12.2019
2. ಈ ಕಛೇರಿ ಸುತ್ತೋಲೆ ಸಂ.ಜ.ಅ.ಇ./ಕಾನಿ/ಕಜಯೋ-II(ಸುಜಲ-III) /ಸಂ.ಜ.ಉ./2017-18 ದಿ:31.12.2019
3. ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ, ಇವರ ಪತ್ರಗಳ ಸಂ: ಜಕೃನಿ/ಚಿ/ತಾಂಅ-1/ಸುಜಲ-3/2020-21 ದಿನಾಂಕ 28.09.2020 (ಇ-ಮೇಲ್ ದಿನಾಂಕ: 29.09.2020)

**ಪೀಠಿಕೆ:-**

ಸುಜಲ-III ಯೋಜನೆಯು ದಿನಾಂಕ 31.12.2019 ರಂದು ಮುಕ್ತಾಯಗೊಂಡ ಕಾರಣ ಸುಜಲ-III ಯೋಜನಾ ನಂತರದ ಅವಧಿಯಲ್ಲಿ ಜನವರಿ 2020 ರಿಂದ ಡಿಸೆಂಬರ್ 2024 ರವರೆಗೆ ಸುಜಲ-III ನಿರ್ಗಮನ (Exit Strategy) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ದಿನಾಂಕ: 07.11.2019 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಕರ್ನಾಟಕ ಸರ್ಕಾರ, ರವರ ಅಧ್ಯಕ್ಷತೆಯಲ್ಲಿ ನಡೆದ 14ನೇ Project Empowered Committee (PEC) ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ, ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಸುಜಲ-III ನಿರ್ಗಮನ ಕಾರ್ಯಕ್ರಮವನ್ನು ಕಾರ್ಯಕ್ರಮ ಅನುಷ್ಠಾನ ಮಾಡಲು ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿರುತ್ತದೆ. ಆದಕಾರಣ, ಸದರಿ ಕಾರ್ಯಕ್ರಮದಡಿ ಸಂಬಂಧಿತ ರೈತ ಸಂಪರ್ಕ ಕೇಂದ್ರಗಳ ಮೂಲಕ ಒಂದು ದಿನದ ಗ್ರಾಮ ಮಟ್ಟದ ತರಬೇತಿಗಳನ್ನು ಆಯೋಜಿಸಲು ಹಾಗೂ LRI ಎಕ್ಸ್‌ಟೆನ್ಶನ್ ಮ್ಯಾನೇಜರ್ ಸಿಬ್ಬಂದಿಗಳನ್ನು ಮುಂದುವರಿಸಲು ಯೋಜನಾ ಜಿಲ್ಲೆಗಳಿಗೆ ಸೂಚಿಸಲಾಗಿರುತ್ತದೆ (ಉಲ್ಲೇಖ-2). ಆದ್ದರಿಂದ, ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ, ಇವರು ತರೀಕೆರೆ ತಾಲೂಕಿನಲ್ಲಿ ಜನವರಿ 2020 ರಿಂದ ಮಾರ್ಚ್ 2020 ವರೆಗೆ ಕಾರ್ಯನಿರ್ವಹಿಸಿರುವ 4 ಜನ LRI ಎಕ್ಸ್‌ಟೆನ್ಶನ್ ಮ್ಯಾನೇಜರ್ ಸಿಬ್ಬಂದಿಗಳ ವೇತನ ಪಾವತಿಸಲು ಒಟ್ಟು ರೂ.3,00,333/- (ರೂ.ಮೂರು ಲಕ್ಷದ ಮುನ್ನೂರಮೂವತ್ತಮೂರು ಮಾತ್ರ) ಅನುದಾನವನ್ನು ಕೋರಿರುತ್ತಾರೆ (ಉಲ್ಲೇಖ-3).

ಈ ಹಿನ್ನೆಲೆಯಲ್ಲಿ, ಈ ಕಛೇರಿಯ Account of Chief Executive Officer SLNA, Watershed Development Department -Account No.:04462010093831, Syndicate Bank, BWSSB ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಖಾತೆಗೆ ಜಮೆ ಮಾಡಿರುವ ಸುಜಲ-III ಯೋಜನೆಯಡಿ 2019-20 ನೇ ಸಾಲಿನಲ್ಲಿ ವೆಚ್ಚವಾಗದೆ ಉಳಿಕೆಯಾದ ಅನುದಾನ ಮೊತ್ತದಲ್ಲಿ ರೂ.3,00,333/- (ರೂ. ಮೂರು ಲಕ್ಷದ ಮುನ್ನೂರಮೂವತ್ತಮೂರು ಮಾತ್ರ) ಮೊತ್ತವನ್ನು ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ, ಇವರಿಗೆ ವರ್ಗಾಯಿಸಲು ಅನುಮೋದಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಕಛೇರಿ ಆದೇಶ ಸಂಖ್ಯೆ:ಸುಜಲ-III/ನಿರ್ಗಮನ ಕಾ. (Ext. Str.).:ಚಿಕ್ಕಮಗಳೂರು.:ಅನುದಾನ.ಬಿ.:2020-21,ದಿನಾಂಕ:06.10.2020**

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ,, ಇವರಿಗೆ ಸುಜಲ-III ನಿರ್ಗಮನ ಕಾರ್ಯಕ್ರಮದಡಿ ತರೀಕೆರೆ ತಾಲೂಕಿನಲ್ಲಿ ಜನವರಿ 2020 ರಿಂದ ಮಾರ್ಚ್ 2020 ವರೆಗೆ ಕಾರ್ಯನಿರ್ವಹಿಸಿರುವ 4 ಜನ LRI ಎಕ್ಸ್‌ಟೆನ್ಶನ್ ಮ್ಯಾನೇಜರ್ ಸಿಬ್ಬಂದಿಗಳ ವೇತನ ಪಾವತಿಸಲು ರೂ.3,00,333/- (ರೂ. ಮೂರು ಲಕ್ಷದ ಮುನ್ನೂರಮೂವತ್ತಮೂರು ಮಾತ್ರ) ಅನುದಾನವನ್ನು ಈ ಕಛೇರಿಯ Account of Chief Executive Officer SLNA, Watershed Development Department -Account No.:04462010093831, Syndicate Bank, BWSSB ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಖಾತೆಗೆ ಜಮೆ ಮಾಡಿರುವ ಸುಜಲ-III ಯೋಜನೆಯಡಿ 2019-20 ನೇ ಸಾಲಿನಲ್ಲಿ ವೆಚ್ಚವಾಗದೆ ಉಳಿಕೆಯಾಗಿರುವ ಅನುದಾನ ಮೊತ್ತದಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವರ್ಗಾಯಿಸಲು ಆದೇಶಿಸಿದೆ.

ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ, ಇವರು ಬಿಡುಗಡೆಗೊಳಿಸಿರುವ ಅನುದಾನವನ್ನು ಉಲ್ಲೇಖ(3) ರ ಪತ್ರದಲ್ಲಿ ತಿಳಿಸಿರುವ ಚಟುವಟಿಕೆಗಳ ವೆಚ್ಚದ ಪಾವತಿಗೆ ಮಾತ್ರ ಇಲಾಖಾ ಮಾರ್ಗಸೂಚಿ ಹಾಗೂ ಆರ್ಥಿಕ ನಿಯಮಗಳ ಅನ್ವಯ ಭರಿಸತಕ್ಕದ್ದು ಮತ್ತು ವೆಚ್ಚದ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು. ಮಾಡಿರುವ ವೆಚ್ಚಕ್ಕೆ ಅನುಗುಣವಾಗಿ ಲೆಕ್ಕಪತ್ರವನ್ನು ನಿರ್ವಹಿಸಿ ತಪಾಸಣೆ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

7/X/2020

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ
ಬೆಂಗಳೂರು

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
2. ಮುಖ್ಯಲೆಕ್ಕಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಚಿಕ್ಕಮಗಳೂರು ಜಿಲ್ಲೆ ಇವರಿಗೆ
4. ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ, ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
5. ಕಛೇರಿ ಪ್ರತಿ / ಆದೇಶದ ಕಡತಕ್ಕೆ.